## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ

ಸಿ.ಸಿ.911/2017

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ. ಅನುಷ | ಸಿಡಬ್ಲೂಃ **04** |
| ಗಂಡನ ಹೆಸರು ಃ | | ಡಾ. ಅಭಿಶೇಕ್ ಹೆಬ್ಬಲಿಕರ್ | ಪಿಡಬ್ಲೂಃ **03** |
| ವಯಸ್ಸು | ಃ | 36 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ನೇತ್ರ ತಜ್ಞರು, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ, ಗುಡಿಬಂಡೆ | 13.08.2026 |
| ವಾಸ ಸ್ಥಳ | ಃ | ಚಿಕ್ಕಬಳ್ಳಾಪುರ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ಡಿಸೆಂಬರ್**-2015** ರಿಂದ ಜುಲೈ**-2019** ರವರಿಗೆ ಶಿಡ್ಲಘಟ್ಟ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿಃ**26.05.2017** ರಂದು ಮದ್ಯಾಹ್ಣ **03.30** ರ ಸಮಯದಲ್ಲಿ ಚಾ.ಸಾ.**1** ರವರು ನಾಗರಾಜ್ ರವರು ಅದೇ ದಿನ ಮದ್ಯಾಹ್ಣ **03.15** ಗಂಟೆಗೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ನನ್ನ ಮುಂದೆ ಚಿಕಿತ್ಸೆಗೆ ಹಾಜರಾಗಿರುತ್ತಾರೆ.

ಚಾಸಾ**-1** ರವರನ್ನು ಪರೀಕ್ಷಿಸಿದಾಗ ಈ ಕೆಳಗಂಡ ಗಾಯಗಳು ಕಂಡು ಬಂದಿರುತ್ತವೆ.

**1.** ಎಭಾಗದ ಕೆನ್ನೆಯ ಮೇಲೆ **0.5 X 0.5** ಸೆಂ.ಮೀ ಅಳತೆಯ ಕೆಂಪು ಬಣ್ಣದ ತರಚಿದ ಗಾಯ ಕಂಡು ಬಂದಿರುತ್ತದೆ.

**2.** ಎದೆಯ ಎಡಭಾಗದ ಎಡ ಭುಜದ ಪಕ್ಕದಲ್ಲಿ **1X1** ಸೆಂ.ಮೀ ಅಳತೆಯ ಕೆಂಪು ಬಣ್ಣದ ತರಚಿದ ಗಾಯ ಗಾಯ ಕಂಡು ಬಂದಿರುತ್ತದೆ.

**3.** ಚಾ.ಸಾ.**1** ರವರನ್ನು ಪರೀಕ್ಷಿಸಿ, ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆಂದು ಅಭಿಪ್ರಾಯ ಪಟ್ಟು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ.**4** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ.**4**(ಎ) ಎಂದು ಗುರುತಿಸಲಾಯಿತು. ನಿ.ಪಿ.**4** ರಲ್ಲಿ ನಮೂದಿಸಿರುವ ಗಾಯಗಳು ಒಬ್ಬ ವ್ಯಕ್ತಿ ಮು.ಮಾ**-1** ಚಾಕುವಿನಿಂದ ಹೊಡೆದರೆ ಆಗುತ್ತವೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಎ ಎ ವಕೀಲರಿಂದಃ

ಚಾಸಾ-1 ರವರು ನನ್ನ ಮುಂದೆ ಚಿಕಿತ್ಸೆಗಾಗಿ ಹಾಜರಾದಾಗ ಸಂಬಂಧಪಟ್ಟ ಪೋಲಿಸ್ ಠಾಣೆಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಹಲವಾರು ವರ್ಷಗಳಾಗಿರುವುದರಿಂದ ಪೋಲಿಸರು ಮಾಹಿತಿಯ ಆಧಾರದ ಮೇಲೆ ಆಸ್ಪತ್ರೆಗೆ ಬಂದಿದ್ದರೋ ಇಲ್ಲವೋ ಎಂಬು ದು ನನಗೆ ಮರೆತು ಹೋಗಿರುತ್ತದೆ. ಸಾಮಾನ್ಯವಾಗಿ ಪೊದೆಗಳನ್ನು ಕತ್ತರಿಸುವಾಗ ಪೊದೆಯಲ್ಲಿ ಇರುವ ಗಿಡ ಮತ್ತು ಮುಳ್ಳು ತರಚಿದರೆ ನಿಪಿ-4 ರಲ್ಲಿ ಹೇಳಿರುವ ಗಾಯಗಳು ಆಗವ ಸಾಧ್ಯತೆಗಳಿವೆ ಎಂದರೆ ಸರಿ. ತರಚಿದ ಗಾಯಗಳು ಕೆಂಪು ಬಣ್ಣದಲ್ಲಿದ್ದು, ಆದರೆ ಅವುಗಳಿಂದ ಯಾವುದೇ ರಕ್ತ ಬರುತ್ತಿರಲಿಲ್ಲ. ನಾನು ಚಾಸಾ-1 ರವರನ್ನು ಪರೀಕ್ಷಿಸದೇ ಇದ್ದರೂ ಮತ್ತು ಚಾಸಾ-1 ರವರಿಗೆ ನಿಪ-4 ರಲ್ಲಿ ಹೇಳಿರುವಂತೆ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.